
RESEARCH DIRECTIONS
ISSN: 2321-5488
IMPACT FACTOR : 5.1723 (UIF)
VOLUME - 5 | ISSUE - 5 | NOVEMBER – 2017

# ಬಸವಣ್ಣನವರ ವನಚಗಳಲ್ಲಿ ಭಕ್ತಿಯ ಪರಾಕಷ್ಟೆ

**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**




ಬಸವಣ್ಣನವರು ಈಗಿನ ವಿಜಾಪುರ ಜಿಲ್ಲೆಯ ಬಾಗೇವಾಡಿ ಗ್ರಾಮ. ಪಂಡಿತೋತ್ತಮರಿಂದ ವಿಜೃಂಭಿಸುತ್ತಿದ್ದ ಪಟ್ಟಣವಾಗಿದೆ. ಬಸವಣ್ಣನವರ ತಂದೆ ಮಾದಿರಾಜ ಮತ್ತು ಮಾದಲಾಂಬೆ, ಮಾದಲಾಂಬಿಕೆಯ ತವರೂರಾದ ಇಂಗುಳೇಶ್ವರದಲ್ಲಿ ಬಸವಣ್ಣನ ಜನನವಾಯಿತು. ಬೆಳೆದು ದೊಡ್ಡವನಾದ ತಂದೆ ತಾಯಿಗಳು ವೈದಿಕಾಚಾರನಿಷ್ಠರು. ತಂದೆಯಂತೂ ದೊಡ್ಡ ಸಂಸ್ಕೃತ ವಿದ್ವಾಂಸ, ಊರಿನಲ್ಲಿ ಹಲವಾರು ಶ್ರೇಷ್ಠ ವಿದ್ವಾಂಸರ ಮನೆಗಳಲ್ಲಿ ವಿದ್ಯಾದಾನವು ನಡೆಯುತ್ತಿತು. ಇದರಿಂದಾಗಿ ಬಸವಣ್ಣನಿಗೆ ಚಿಕ್ಕ ವಯಸ್ಸಿನಲ್ಲಿಯೇ ನೂರಾರು ಸಂಸ್ಕೃತ ಶ್ಲೋಕಗಳು, ಅವುಗಳ ಅರ್ಥ ತಿಳಿಯದಿದ್ದರೂ ಮುಖೋದ್ಗತವಾಗಿದ್ದವು. ಬಸವಣ್ಣನವರು ಒಂದು ವಯಸ್ಸಿಗೆ ಮೀರಿದ ಆಲೋಚನೆಯ ಪಕ್ವತೆ, ಇತರರಿಗೆ ಸಹಾಯ ಮಾಡುವ ಸೇವಾ ಮನೋಭಾವವನ್ನು ಹೊಂದಿರುವಂತಹ ವ್ಯಕ್ತಿತ್ವವೂ ಆಗಿತ್ತು.

“ಅಯ್ಯಾ, ನೀನು ನಿರಾಕಾರವಾದಲ್ಲಿ
ನಾನು ಜ್ಞಾನವೆಂಬ ವಾನವಾಗಿದ್ದೆ ಕಾಣಾ
ಅಯ್ಯಾ, ನೀನು ನಾಂಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿದ್ದಲ್ಲಿ
ನಾನು ವೃಷಭನೆಂಬ ವಾಹನವಾಗಿದ್ದೆ ಕಾಣಾ.
ಅಯ್ಯಾ, ನೀನೆನ್ನ ಭವವ ಕೊಂದಹೆನೆಂದು
ಜಂಗಮಲಾಂಛನವಾಗಿ ಬಂದಲ್ಲಿ
ನಾನು ಭಕ್ತನೆಂಬ ವಾಹನವಾಗಿದ್ದೆ ಕಾಣಾ ಕೂಡಲ ಸಂಗಮ ದೇವ”[೧]

ಒಂದು ದಿನ ದೇವನಲ್ಲಿ ಒಂದು ನಿರಾಕಾರ ಸೃಷ್ಟಿಕರ್ತನಾಗದ ದೇವನು ನಿರಾಕಾರನು, ನಿರ್ಗುನು ಆಗಿದ್ದಾಗ ಉದಿಸಿದ, ಅಭಿವ್ಯಕ್ತಗೊಂಡ ವಿಚಾರವೂ ಬರುವುದು. ನಂತರ ದೇವನು ನಾಟ್ಯಕ್ಕೆ ನಿಂತ ಅಂದರೆ ಸೃಷ್ಟಿಯು ರೂಪುಗೊಳ್ಳುವ ಕ್ರಿಯೆ ನಡೆಯಿತು. ಸೃಷ್ಟಿಯ ಉದ್ಧಾರಕ್ಕಾಗಿ ಧರ್ಮ ವೃಷಭ ಅಗತ್ಯ ಬರುವುದು. ಆಗ ಭಕ್ತನ ಭವವನ್ನು ಕಳೆಯಲೆಂದು ಜಂಗಮ ಬಂದಾಗ ಶಕ್ತಿ ತತ್ವ (ಭಕ್ತನೆಂಬ) ವಾಹನವಾಗಿ ಕಾರ್ಯಮಾಡುತ್ತದೆ. ಎಂಬುವುದು ಬಸವಣ್ಣನವರ ವಚನಗಳಲ್ಲಿ ಅಡಗಿರುವ ಭಕ್ತಿರಸವನ್ನು ತಿಳಿಸಿಕೊಡಲಾಗಿದೆ.

“ನೀರಿಂಗ ನೆಯ್ದಿಲೆ ಶೃಂಗಾರ, ಸಮುದ್ರಕ್ಕೆ ತೆರೆಯೇ ಶೃಂಗಾರ
ನಾರಿಗೆ ಗುಣವೇ ಶೃಂಗಾರ; ಗಗನಕ್ಕೆ ಚಂದ್ರಮನೇ ಶೃಂಗಾರ:
ನಮ್ಮ ಕೂಡಲಸಂಗನ ಶರಣರಿಗೆ
ನೊಸಲ ವಿಭೂತಿಯೇ ಶೃಂಗಾರ.”[೨]

ಈ ವಚನದಲ್ಲಿ ಬಸವಣ್ಣನವರು ಬುದ್ಧಿಯನ್ನು ಒಪ್ಪಿಸುವುದಕ್ಕಿಂತ ಹೃದಯವನ್ನು ಒಪ್ಪಿಸುವ, ಶ್ರದ್ಧ, ಭಕ್ತಿಯನ್ನು ಒಲಿಸುವ ಪ್ರಯತ್ನವಿದೆ. ನೀರಿಗೆ ಕಮಲದಿಂದ ಚೆಲುವು ಬರುವುದು, ಸಮುದ್ರಕ್ಕೆ ಅಲೆಗಳಿಂದ ಶೋಭೆಯುಂಟಾಗುವುದು. ಸ್ತ್ರೀಗೆ ಗುಣವೇ ಅಲಂಕಾರವಾಗಿರುವುದು. ಆಕಾಶಕ್ಕೆ ಚಂದ್ರಮನಿಂದ ಚಲುವಾಗಿ ಕಾಣುವುದು. ನಮ್ಮ ಕೂಡಲಸಂಗನ ಶರಣರಣೆಗೆ ವಿಭೂತಿಯಿಂದ ಶೃಂಗಾರವಾಗಿ ಕಾಣುವರು. ಅವರನ್ನು ನೋಡಿದರೆ ಭಕ್ತಿ ಭಾವವೋ ಮೂಡಿ ಮನವೂ ಶುದ್ಧವಾಗುವುದು.

“ಒಲಗೆ ಕುಟಲ, ಹೊರಗೆ ವಿನಯವಾಗಿ
ಭಕ್ತರೆನಿಸಿಕೊಂಬವರನೊಲ್ಲನಯ್ಯಾ ಲಿಂಗವು!
ಅವರು ಸತ್ಪಥಕ್ಕೆ ಸಲ್ಲರು ಸಲ್ಲರಯ್ಯ!

ಒಳಹೊರಗೊಂದಾಗದವರಿಗೆ ಅಳಿಯಾಸದೋರಿ
ಬೀಸಾಡುವನವರ ಜಗದೀಶ ಕೂಡಲಸಂಗಮದೇವ"[೩]

ಈ ವಚನದಲ್ಲಿ ಒಳಗೊಂದು ಹೊರಗೊಂದು ನಡೆದುಕೊಳ್ಳುವ ವ್ಯಕ್ತಿಯನ್ನು ದೇವನು ಮೆಚ್ಚುವುದಿಲ್ಲ ಎನ್ನುವುದು ತಿಳಿಸಿದ್ದಾರೆ. ಒಳಗೆ ಕಪಟಿಯಾದ ನಟಿಸುವಂತಹವನು ಭಕ್ತನಾಗಿಸುವುದಿಲ್ಲ. ಅಂತಹವರು ಒಳ್ಳೆಯ ಮಾರ್ಗದಲ್ಲಿ ಸಲ್ಲುವುದಿಲ್ಲ. ಅವರಿಗೆ ದೂರವಿರಿಸುವನು ದೇವನು ಎಂದು ತಿಳಿಸಿದ್ದಾರೆ.

"ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ!
ತನುವಿನಲಿ ಹುಸಿತುಂಬಿ, ಮನದಲ್ಲಿ ವಿಷಯತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ !
ಕೂಡಲಸಂಗಮದೇವ"[೪]

ಈ ವಚನದಲ್ಲಿ ಮನೆಯ ಸ್ಥಿತಿಯನ್ನು ತಿಳಿಯುವುದಾಗಿದೆ. ನಾವು ಯಾರನ್ನೇ ನೋಡಲು ಬಹುಕಾಲದ ಬಳಿಕ ಅವರ ಮನೆಗೆ ಹೋಗುತ್ತೇವೆ. ಅಲ್ಲಿ ಮನೆಯ ಹೊಸ್ತಿಲಲ್ಲೇ ಹುಲ್ಲು ಹುಟ್ಟಿಕೊಂಡಿದೆ. ಎಲ್ಲೆಲ್ಲೂ ಧೂಳು ತುಂಬಿದೆ. ಮನೆಯಲ್ಲಿ ಮನೆಯ ಒಡೆಯನು ಇದ್ದಾನೆಯೇ ಇಲ್ಲವೇ ಎಂದು ವಿಚಾರಿಸಬೇಕೇನು ಅಂತೆಯೇ, ಕಲ್ಮಷವಾಗಿರುವ ಮನಸ್ಸಿನಲ್ಲಿ ಮನದ ಒಡೆಯ ಖಂಡಿತ ಇರುವುದಿಲ್ಲ. ಆ ಮನದ ಒಡೆಯನ ವಾಸಕ್ಕೆ ಯೋಗ್ಯವಾಗುವಂತೆ ನಮ್ಮ ಮನಸ್ಸನ್ನು ಶುದ್ಧಗೊಳಿಸುವುದು ಒಂದು ದಾರಿ. ಆದರೆ ಮನಸ್ಸಿನ ಸ್ವರೂಪವಾಗಿದೆ.

"ಗಂಡ ಶಿವಲಿಂಗದೇವರ ಭಕ್ತ
ಹೆಂಡತಿ ಮಾರಿಮಸಣಿಯ ಭಕ್ತೆ;
ಗಂಡ ಕೊಂಬುದು ಪಾದೋದಕ ಪ್ರಸಾದ,
ಹೆಂಡತಿ ಕೊಂಬುದು ಸುರೆಮಾಂಸ
ಭಾಂಡ – ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ
ಕೂಡಲ ಸಂಗಮದೇವ"[೫]

ಸಂಸಾರದಲ್ಲಿ ಗಂಡನು ಶಿವಭಕ್ತನಾಗಿ ಶುಭ್ರ ಆಚರಣೆಗಳನ್ನು ಅಳವಡಿಸಿಕೊಂಡು, ಅವನ ಹೆಂಡತಿ ಹಿಂದಿನ ರೀತಿಯಲ್ಲಿಯೇ ಕೊಳಕು ಅಭ್ಯಾಸಗಳನ್ನು ಮುಂದುವರಿಸಿರುವ ಒಂದು ಕುಟುಂಬದ ಚಿತ್ರಣವಿದೆ. ಅಂಥ ಕುಟುಂಬ ಹೊರಗೆ ತೊಳೆದ 'ಹೆಂಡದ ಮಡಕೆ'ಯೇ ಸರಿ ಎಂಬ ಮೇಲಿನ ವಚನವು ಬಹು ಅರ್ಥಪೂರ್ಣ. ಗಂಡ ಸಂಸಾರದ ಹೊರಭಾಗ, ಹೆಂಡತಿ ಅದೇ ಸಂಸಾರದ ಒಳಭಾಗ. ಎರಡು ಒಂದನ್ನು ಬಿಟ್ಟು ಇನ್ನೊಂದಿಲ್ಲ. ಮೊದಲು ಹೆಂಡದ ಮಡಕೆಯಂತಿದ್ದ ಮೇಲಿನ ಸಂಸಾರದ ಹೊರಭಾಗವೂ ಮಾತ್ರ ಶುಭ್ರವಾದರೆ ಸಾಲದು, ಒಳಭಾಗವೂ ಶುಭ್ರವಾಗಬೇಕು ಎಂಬಲ್ಲಿ ಹೆಣ್ಣಿನ ಸಂಸ್ಕಾರ, ಶಿಕ್ಷಣ, ಸುಧಾರಣೆಗಳನ್ನು ಬಸವಣ್ಣ ಒತ್ತಿ ಹೇಳುತ್ತಿದ್ದಾರೆ.

"ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
ಇದ್ದರೇನೋ, ಶಿವಶಿವಾ, ಹೋದರೇನೋ !
ಕೂಡಲ ಸಂಗಮ ದೇವ, ಕೇಳಯ್ಯ
ಊಡದ ಆವಿಂಗ ಉಣ್ಣದ ಕರುವ ಬಿಟ್ಟಂತೆ"[೬]

ಗಂಡನ ಮೇಲೆ ಸ್ನೇಹ, ಪ್ರೀತಿ ಇಲ್ಲದ ಹೆಂಡತಿ, ಲಿಂಗದ ಮೇಲೆ ಶ್ರದ್ಧೆ, ನಿಷ್ಠೆ ಇಲ್ಲದ ಭಕ್ತನು ಇದ್ದರು ಅಷ್ಟೇ ಹೋದರು ಅಷ್ಟೇ ಕೂಡಲ ಸಂಗಮ ದೇವ ಕೇಳು ಊಟವನ್ನುಮಾಡದ ಕರುವನ್ನು ಬಿಟ್ಟ ಹಾಗೆ ಎಂದು ತಿಳಿಸಿದ್ದಾರೆ.

"ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯಾ
ವೇದಪ್ರಿಯ ಶಿವನೆಂಬರು – ಭೇದಪ್ರಿಯ ಶಿವನಲ್ಲಯ್ಯಾ
ನಾದವ ಮಾಡಿದ ರಾವಣಂಗೆ ಅರೆಯಾಯುಷ್ಯವಾಯಿತು
ವೇದವನೋದಿದ ಬ್ರಹ್ಮಂಗೆ ಶಿರ ಹೋಯಿತು !
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ
ಭಕ್ತಿ ಪ್ರಿಯ ನಮ್ಮ ಕೂಡಲಸಂಗಮದೇವ "[೭]

ಬಸವಣ್ಣನವರು ಈ ವಚನದಲ್ಲಿ ಪರಮಾತ್ಮನ ದರ್ಶನಕ್ಕಾಗಿ ಭಕ್ತಿಯ ಹಾದಿಯನ್ನು ಹಿಡಿದರು. ಈ ಪಥ ಅವರಿಗೆ ಬಹು ಪ್ರಿಯವಾದದ್ದು. ದೇವರಿಗೆ ಸಂಗೀತಕ್ಕೆ ಮರುಳಾಗುವುದಿಲ್ಲ, ವೇದಗಳ ಅಧ್ಯಯನದಿಂದಲೂ ಅವನು ಸಿಗುವುದಿಲ್ಲ. ಅವನು ಭಕ್ತಿಗೆ ಸುಲಭವಾಗಿ ವಶನಾಗುತ್ತಾನೆ. ಅದಕ್ಕಾಗಿ ಭಕ್ತಿಯ ಸಾಧನೆ ಒಂದು ರೀತಿಯಲ್ಲಿ ಸುಲಭ, ಆದರೆ ಅಷ್ಟೇ ಕಷ್ಟ, ಶುದ್ಧ ಮನಸ್ಸಿನಿಂದ, ವಿನಯದಿಂದ, ದಾಸ್ಯಮನೋಭಾವದಿಂದ ಸರ್ವಸರ್ಮಣಾ ಬುದ್ಧಿಯಿಂದ ಸದಾ ಪರಮಾತ್ಮನಿಗಾಗಿ ಮೀಸಲಾಗಿಸುವುದು. ಅವನ ನಾಮ ಸಂಕೀರ್ತನೆಯನ್ನು ಮಾಡುವುದು. ಅವನಲ್ಲಿ ಅಚಲವಾದ ಪ್ರೇಮವನ್ನಿಡುವುದೇ ಭಕ್ತಿ, ಇಂತಹ ಭಕ್ತನ ಹಂಬಲವು ಬಹುಬೇಗ ಭಗವಂತನಿಗೆ ಕಳಿಸುತ್ತದೆ. ದೇವರು ಭಕ್ತನನ್ನು ಹಲವು ರೀತಿ ಪರೀಕ್ಷೆ ಮಾಡುತ್ತಾನೆ. ಕಷ್ಟ–ನೋವು, ಕೊಟ್ಟು ನೋಡುತ್ತಾನೆ. ಎಲ್ಲ ಕಾಲದಲ್ಲೂ. ಭಕ್ತನು ಒಂದೇ ರೀತಿಯದ ಪ್ರೇಮವನ್ನಿಟ್ಟುಕೊಂಡಿದ್ದರೆ ದೇವನು ಒಲಿಯುತ್ತಾನೆ ಎಂದು ತಿಳಿಸಿದ್ದಾರೆ.

"ಭಕ್ತಿ ಇಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲು ಬೇಡಿದೆ,
ದಾಸಯ್ಯನ ಮನೆಯಲು ಬೇಡಿದೆ,
ಚೆನ್ನಯ್ಯನ ಮನೆಯಲು ಬೇಡಿದೆ,
ಎಲ್ಲ ಪುರಾತರು ನೆರೆದು
ಭಕ್ತಿ–ಭಿಕ್ಷವನಿಕ್ಕಿದರೆ ಎನ್ನ ಪಾತ್ರ ತುಂಬಿತ್ತು.
ಕೂಡಲ ಸಂಗಮದೇವ"[೮]

ಭಕ್ತಿಯಿಲ್ಲದ ಬಡವನಾಗಿ,ಕಕ್ಕಯ್ಯಾ, ದಾಸಯ್ಯ, ಚೆನ್ನಯ್ಯನ ಮನೆಯಲು ಬೇಡಿದೆ ಆಗ ಎಲ್ಲ ಹಿರಿಯರು ನೆರೆದು ಭಕ್ತಿ–ಭಿಕ್ಷೆಯನ್ನು ನೀಡಿ ನನ್ನ ಪಾತ್ರೆಯನ್ನು ತುಂಬಿದರು ದೇವ ಎಂದು ಹೇಳಿದ್ದಾರೆ. ಭಕ್ತಿಯೆಂಬುವುದು ಬೇಡಿ ಪಡೆಯಲು ಸಾಧ್ಯವಿಲ್ಲ ಅವರ ಭಕ್ತಿಯನ್ನು ಅರಿತು ನಡೆಯುವುದು ನಿಜವಾದ ಭಕ್ತನೆನಿಸಿಕೊಳ್ಳುವನು. ಹೀಗೆ ಈ ಮೇಲಿನ ಎಲ್ಲ ವಚನಗಳಲ್ಲಿ ಭಕ್ತಿಯ ಪರಾಕಾಷ್ಟೆಯನ್ನು ತಿಳಿಸಲು ಯತ್ನಿಸಿರುವುದಾಗಿದೆ.

**ಅಡಿಟಿಪ್ಪಣಿ**

೧ ಬಸವರಾಜು ಎಲ್. : ಬಸವಣ್ಣನವರ ವಚನಗಳು ಪು – ೪೨
೨ ಚಿದಾನಂದಮೂರ್ತಿ ಎಂ. : ಬಸವಣ್ಣನವರು ಪು – ೧೩೯
೩ ಬಸವರಾಜು ಎಲ್. : ಬಸವಣ್ಣನವರ ವಚನಗಳು ಪು – ೫೩
೪ ಮಾತೆ ಮಹಾದೇವಿ : ವಚನಾಮೃತ ಪು – ೬೫
೫ ಬಸವರಾಜು ಎಲ್. : ಬಸವಣ್ಣನವರ ವಚನಗಳು ಪು – ೫೫
೬ ಬಸವರಾಜು ಎಲ್. : ಬಸವಣ್ಣನವರ ವಚನಗಳು ಪು – ೫೫–೫೬
೭ ಬಸವರಾಜು ಎಲ್. : ಬಸವಣ್ಣನವರ ವಚನಗಳು ಪು – ೫೬–೬೭
೮ ಬಸವರಾಜು ಎಲ್. : ಬಸವಣ್ಣನವರ ವಚನಗಳು ಪು – ೮೭


ಡಾ. ಶಿವಗಂಗಾ ಯು. ಬಿಲಗುಂದಿ
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.